**ಎರಡನೆ ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿಗಳು ಪ್ರ.ವರ್ಗ ಗೋಕಾಕ ಇವರ ನ್ಯಾಯಾಲಯದಲ್ಲಿ**

**ಸಾಃ ಗೋಕಾಕ.**

ಸಿ.ಸಿ. ನಂ.**1672/2011**

ಆರೋಪಿತನ ಹೆಸರುಃ 1) ಅಡಿವೆಪ್ಪ ನಿಂಗಪ್ಪ ನಾಯಿಕ

ಸಾಃ ಬೂಡ್ರ್ಯಾನೂರ ಗ್ರಾಮ

ತಾ **&** ಜಿಃ ಬೆಳಗಾವಿ

**ಕಲಂ 313 ಸಿ.ಆರ್.ಪಿ.ಸಿ. ಕೆಳಗೆ ಆರೋಪಿತರ ಹೇಳಿಕೆ**

ಪ್ರಃ **1** ನಿನ್ನ ವಿರುದ್ದ ನ್ಯಾಯಾಲಯದಲ್ಲಿ ಅಭಿಯೋಜಕರ ಪರ ವಿಚಾರಣೆ ಮಾಡಿಸಿದ ಸಾಕ್ಷಿಗಳು ನೀಡಿರುವ ಹೇಳಿಕೆಗಳ ಬಗ್ಗೆ ನಿಮಗೆ ತಿಳಿದಿದೆಯಾ?

ಉಃ

ಪ್ರಃ **2** ಪ್ರಾಸಾ.1 ಅಮೃತ ಗುಡಿ ರವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನಂದರೆ, ತಾನು 2010 ರಿಂದ 2012 ರವರೆಗೆ ಗೋಕಾಕ ಅಬಕಾರಿ ವಲಯದಲ್ಲಿ ಅಬಕಾರಿ ನಿರೀಕ್ಷಕರು ಅಂತಾ ಕಾರ್ಯನಿರ್ವಹಿಸಿರುತ್ತೇನೆ.

ದಿಃ 19-08-2011 ರಂದು ಸಾಯಂಕಾಲ 6-00 ಗಂಟೆ ಸುಮಾರಿಗೆ ಪಂಚರಾದ ಚಾಸಾ-2 ಮತ್ತು 3 ರವರನ್ನು ನಮ್ಮ ಸಿಬ್ಬಂದಿಯಾದ ಚಾಸಾ-5 ರವರು ಕರೆದುಕೊಂಡು ಬಂದರು. ನಂತರ ಅವರಿಗೆ ಗೋಕಾಕ ತಾಲೂಕಿನಲ್ಲಿ ರಾತ್ರಿ ಗಸ್ತು ತಿರುಗಬೇಕಾಗಿ ಅಂತಾ ತಿಳಿಸಿ ಪಂಚರಾಗಲು ಕೇಳಿಕೊಂಡೆನು. ಆಗ ಅವರು ಒಪ್ಪಿಕೊಂಡರು. ನಂತರ ರಾತ್ರಿ 9-30 ಗಂಟೆ ಸುಮಾರಿಗೆ ಚಾಸಾ-4 ಮತ್ತು 5 ಹಾಗೂ ಪಂಚರು ಕೂಡಿಕೊಂಡು ಸರಕಾರಿ ವಾಹನ ಸಂಃ ಕೆಎ-22 ಜಿ 454 ನೇದ್ದರಲ್ಲಿ ಹೊರಟು ಕನಸಗೇರಿ, ಉರಬಿನಹಟ್ಟಿ. ಕುಂದರಗಿ, ದಾಸನಟ್ಟಿ, ಎಂ. ಮಲ್ಲಾಪೂರ, ಅಂಕಲಗಿ ಗ್ರಾಮಗಳಲ್ಲಿ ಗಸ್ತು ತಿರುಗಿ ರಾತ್ರಿ 3-00 ಗಂಟೆ ಸುಮಾರಿಗೆ ಪಂಜಾನಟ್ಟಿ ಗ್ರಾಮದಿಂದ ಗೋಡಕುಂದರಗಿ ಗ್ರಾಮಕ್ಕೆ ಹೋಗುವ ರಸ್ತೆಯ ಮದ್ಯದಲ್ಲಿರುವ ಕೆನಾಲದ ಹತ್ತಿರ ವಾಹನವನ್ನು ಮರೆಯಲ್ಲಿ ನಿಲ್ಲಿಸಿ ಸಿಬ್ಬಂದಿಗಳಿಗೆ ರಸ್ತೆಯ ಎರಡು ಬದಿಗೆ ಮರೆಯಾಗಿ ನಿಲ್ಲಿಸಿ ಸ್ವಲ್ಪ ಹೊತ್ತಿನ ನಂತರ ದ್ವಿಚಕ್ರ ವಾಹನ ಬರುವ ಸಪ್ಪಳ ಕೇಳಿ ಸಿಬ್ಬಂದಿಗಳು ಎಚ್ಚೆತ್ತುಗೊಂಡರು. ನಂತರ ಸಮವಸ್ತ್ರದಲ್ಲಿದ್ದ ಸಿಬ್ಬಂದಿಗಳನ್ನು ಕಂಡು ದ್ವಿಚಕ್ರ ವಾಹನ ಸವಾರನು ಗಾಬರಿಗೊಂಡು ವಾಹವನ್ನು ಅಲ್ಲಿಯೇ ಕೆಡವಿ ಓಡಲು ಪ್ರಯತ್ನಿಸಿದನು. ಆಗ ಸಿಬ್ಬಂದಿಗಳು ಅವನನ್ನು ಬೆನ್ನುಹತ್ತಿ ಹಿಡಿದುಕೊಂಡರು.

ನಂತರ ನಾವು ಪಂಚರು ಕೂಡಿಕೊಂಡು ವಾಹನವನ್ನು ನೋಡಲಾಗಿ ನೋಂದಣಿ ಇಲ್ಲದ ಕಪ್ಪು ಬಣ್ಣದ ಬಜಾಜ ಸ್ಕೂಟರ ಅದರ ಬದಿಯಲ್ಲಿ ಎರಡು ಕಪ್ಪು ಬಣ್ಣದ ರಬ್ಬರ ಟ್ಯೂಬಗಳು ಕಂಡು ಬಂದವು. ಅವುಗಳನ್ನು ಕಂಡು ಕಳ್ಳಭಟ್ಟಿ ಸರಾಯಿ ತುಂಬಿದ ಟ್ಯೂಬಗಳಾಗಿರುತ್ತವೆ ಅಂತಾ ತಿಳಿಸಿ ಆ ವ್ಯಕ್ತಿಯನ್ನು ವಿಚಾರಿಸಲಾಗಿ ಆತನ ಹೆಸರು ಅಡಿವೆಪ್ಪಾ ನಿಂಗಪ್ಪಾ ನಾಯಕ ಸಾಃ ಬುಡ್ರ್ಯಾನುರ

ತಾಃಜಿಃ ಬೆಳಗಾವಿ ಅಂತಾ ತಿಳಿಸಿದನು. ಈ ರೀತಿ ಕಳ್ಳಭಟ್ಟಿ ಸರಾಯಿಯನ್ನು ಹೊಂದಿ ಸಾಗಾಟ ಮಾಡುವದು ಅಪರಾಧ ಅಂತಾ ತಿಳಿಸಿ ಆತನನ್ನೆ ಆರೋಪಿ ಅಂತಾ ಪರಿಗಣಿಸಿ ನಂತರ ಸದರ ಮುದ್ದೆ ಮಾಲಿನಿಂದ 1 x 180 ಎಂ.ಎಲದ ಎರಡು ಬಾಟಲಿಗಳನ್ನು ರಸಾಯನಿಕ ಪರೀಕ್ಷೆ ಅಂತಾ ಸ್ಯಾಂಪಲ ತೆಗೆದು ಅರಿವೆ ಸುತ್ತಿ ದಾರದಿಂದ ಕಟ್ಟಿ ಅರಗಿನಿಂದ ಶೀಲ್ ಮಾಡಲಾಯಿತು. ನಂತರ ಅವುಗಳಿಗೆ ಪಂಚರು ಹಾಗೂ ತನ್ನ ಸಹಿವುಳ್ಳ ಚೀಟಿಗಳನ್ನು ಅಂಟಿಸಿ ತನ್ನ ವಶಕ್ಕೆ ಪಡೆದುಕೊಂಡೆನು. ಸದರಿ ಪಂಚನಾಮೆಯನ್ನು ಸದರಿ ಸ್ಥಳದಲ್ಲಿಯೇ ಕುಳಿತು ವಾಹನದ ಬೆಳಕು ಹಾಗೂ ಬ್ಯಾಟರಿ ಬೆಳಕಿನ ಸಹಾಯದಿಂದ ಜರುಗಿಸಲಾಯಿತು. ನಂತರ ಆರೋಪಿ ಮತ್ತು ಮದ್ದೆ ಮಾಲಿನೊಂದಿಗೆ ಕಚೇರಿಗೆ ಬಂದು ಮೇಲಾಧಿಕಾರಿಗಳಿಗೆ ತಿಳಿಸಿ ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಕಳುಹಿಸಿದೆನು. ಅದೇ ದಿನದಂದು ಸಿಬ್ಬಂದಿಯ ಬೆಂಗಾವಲಿನಲ್ಲಿ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲು ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದು ಇರುತ್ತದೆ. ನಂತರ ದಿಃ 20-08-2011 ರಂದು ಮುದ್ದೆ ಮಾಲನ್ನು ತಾಬಾದಲ್ಲಿ ಇಟ್ಟುಕೊಳ್ಳಲು ಡಿಸಿಇ ಬೆಳಗಾವಿ ರವರಿಗೆ ಅನುಮತಿ ಕೋರಿ ಪತ್ರ ಬರೆದೆನು.

ನಂತರ ದಿಃ 22-09-2011 ರಂದು ಸ್ಯಾಂಪಲಗಳನ್ನು ಚಾಸಾ-6 ರವರ ಮುಖಾಂತರ ಮುಖ್ಯ ರಸಾಯನಿಕ ಪರೀಕ್ಷಕರು ಬೆಂಗಳೂರು ಇವರಿಗೆ ಕಳುಹಿಸಿದೆನು. ದಿಃ 24-09-2011 ರಂದು ಚಾಸಾ-6 ರವರು ಸ್ಯಾಂಪಲ ಹಾಗೂ ವಿಶ್ಲೇಷಣಾ ವರದಿಯನ್ನು ತಂದು ಒಪ್ಪಿ ಸಿದರು. ದಿಃ 17-09-2011 ರಂದು RTO ಗೋಕಾಕ ರವರಿಗೆ ವಾಹನದ ಮಾಲೀಕತ್ವದ ಬಗ್ಗೆ ಪತ್ರ ಬರೆದಿರುತ್ತೇನೆ. ದಿಃ 29-09-20114 ರಂದು ಸದರಿ RTO ಗೋಕಾಕ ರವರು ನೊಂದಣಿ ಸಂಖ್ಯೆ ಹಾಗೂ ಇಂಜಿನ ನಂಬರ ಇಲ್ಲದೇ ಇರುವುದರಿಂದ ವಾಹನದ ಮಾಲೀಕತ್ವ ಬಗ್ಗೆ ವಿವರಣೆ ನೀಡಲು ಸಾಧ್ಯವಿಲ್ಲಾ ಎಂದು ತಿಳಿಸಿದರು. ದಿಃ 24-09-2011 ರಂದು ಚಾಸಾ-4 ರಿಂದ 6 ರವರ ಹೇಳಿಕೆಗಳನ್ನು ಪಡೆದುಕೊಂಡೆನು. ಸದರಿ ಪ್ರಕರಣದ ತನಿಖೆ ಮುಗಿದಿದ್ದರಿಂದ ಅಂತಿಮ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿದೆನು. ಈ ದಿನ ನ್ಯಾಯಾಲಯದ ಮುಂದೆ ಇರುವ ವ್ಯಕ್ತಿಯೇ ಆರೋಪಿಯಾಗಿರುತ್ತಾನೆ ಎಂದು ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರಃ **3** ಪ್ರಾಸಾ. 2 ಸಿದ್ದಪ್ಪಾ ದುರ್ಗಪ್ಪಾ ಹೊಸಮನಿ ರವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ, ತಾನು 2010 ರಿಂದ 2015 ರವರೆಗೆ ಗೋಕಾಕ ಅಬಕಾರಿ ಇಲಾಖೆಯಲ್ಲಿ ಅಬಕಾರಿ ರಕ್ಷಕ ಎಂದು ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ 20-08-2011 ರಂದು ಸಂಜೆ 6-00 ಗಂಟೆಗೆ ತಾನು ಕಚೇರಿಯಲ್ಲಿ ಕಾರ್ಯನಿರ್ವಹಿಸುತಿದ್ದಾಗ ರಾತ್ರಿ 9-00 ಗಂಟೆಗೆ ಅಂಕಲಗಿ ಕಡೆ ಗಸ್ತು ಹಾಗೂ ರಸ್ತೆಗಾವಲು ಮಾಡಲು ಬರಬೇಕು ಎಂದು ಹೇಳಿದಾಗ ನಾನು ಹಾಗೂ ಸಿಬ್ಬಂದಿಯೊಂದಿಗೆ ಹಾಗೂ ಪಂಚರೊಂದಿಗೆ ಸರಕಾರಿ ವಾಹನ ಸಂಃ ಕೆಎ-22 ಜಿ 454 ನೇದ್ದರಲ್ಲಿ ಕನಸಗೇರಿ, ಊರಬಿನಹಟ್ಟಿ, ಕುಂದರಗಿ,

ದಾಸನಟ್ಟಿ. ಎಂ. ಮಲ್ಲಾಪೂರ, ಅಂಕಲಗಿ ಗ್ರಾಮಗಳಲ್ಲಿ ಗಸ್ತು ಮಾಡುತ್ತಾ ಪಂಜಾನಟ್ಟಿ, ಲಗಮೇಶ್ವರ ಗ್ರಾಮಗಳ ಮಧ್ಯದಲ್ಲಿರುವ ಕೆನಾಲ ಹತ್ತಿರ ಇರುವ ಮರದ ಕೆಳಗೆ ಮರೆಯಾಗಿ ವಾಹನ ನಿಲ್ಲಿಸಿ ರಸ್ತೆಯ ಬದಿಗೆ ಅಡಗಿ ಕುತಿಳಿದ್ದೆವು. ಲಗಮೇಶ್ವರ ಕಡೆಯಿಂದ ಒಂದು ಸ್ಕೂಟರ ಮೇಲೆ ಬರುತಿದ್ದನ್ನು ಕಂಡು ನಾನು ಹಾಗೂ ಸಿಬ್ಬಂದಿ ಆತನಿಗೆ ಕೈ ತೋರಿಸಿ ನಿಲ್ಲಿಸಿದಾಗ ಸದರಿ ವ್ಯಕ್ತಿಯು ತಮ್ಮನ್ನು ನೋಡಿ ಓಡಿ ಹೋಗುವಷ್ಟರಲ್ಲಿ ಆತನನ್ನು ಹಿಡಿದು ನಿಲ್ಲಿಸಿದೆವು.

ನಂತರ ಸದರಿ ವ್ಯಕ್ತಿಯ ಕಡೆಯಿದ್ದ ದ್ವಿಚಕ್ರ ವಾಹನವನ್ನು ತಪಾಸಣೆ ಮಾಡಿದಾಗ ಒಂದು ಕಪ್ಪು ಬಣ್ಣದ ಬಜಾಜ ಸ್ಕೂಟರ ನೋಂದಣಿ ಸಂಖ್ಯೆ ಇಲ್ಲದಿರುವದು ಕಂಡು ಬಂದಿತ್ತು. ಸದರಿ ಸ್ಕೂಟರಿಗೆ ಬಾಜುಕ್ಕೆ ಎರಡು ಕಪ್ಪು ಬಣ್ಣದ ರಬ್ಬರ ಟ್ಯೂಬಗಳು ಚಲ್ಲಾಪಿಲ್ಲಿಯಾಗಿ ಬಿದಿದ್ದವು. ಸದರಿ ರಬ್ಬರ ಟ್ಯೂಬನಲ್ಲಿ 20 ಲೀಟರನಂತೆ ಒಟ್ಟು 40 ಲೀಟರ ಕಳ್ಳಭಟ್ಟಿ ಸರಾಯಿ ಕಂಡು ಬಂದಿತ್ತು.

ಸದರಿ ವ್ಯಕ್ತಿಯ ಹೆಸರನ್ನು ವಿಚಾರಿಸಿದಾಗ ಅಡಿವೆಪ್ಪಾ ನಿಂಗಪ್ಪಾ ನಾಯ್ಕ, ವಯಾಃ 24 ವರ್ಷ, ಸಾಃ ಬುಡ್ರಾನೋರ ಎಂದು ತಿಳಿಸಿದನು. ಸ್ಥಳದಲ್ಲಿಯೇ ಆರೋಪಿನನ್ನು ದಸ್ತಗೀರ ಮಾಡಿ ಜಪ್ತಾದ ಮುದ್ದೆ ಮಾಲನ್ನು ವಶಕ್ಕೆ ಪಡೆದುಕೊಂಡೆವು. ಸದರಿ ಮುದ್ದೆ ಮಾಲಿನಿಂದ ಪ್ರತಿಯೊಂದು ಟ್ಯೂಬನಿಂದ 1 x 180 ಎಂ.ಎಲ.ನಷ್ಟು ಬಾಟಲಿಯಲ್ಲಿ ಒಟ್ಟು 2 x 180 ಎಂ.ಎಲ. ಬಾಟಲಿಯಲ್ಲಿ ಸ್ಯಾಂಪಲ ಎಂದು ಕಳ್ಳಭಟ್ಟಿ ಸರಾಯಿಯನ್ನು ತೆಗೆದು ಅವುಗಳಿಗೆ ಅರಿವೆ ಸುತ್ತಿ ದಾರದಿಂದ ಕಟ್ಟಿ ಅರಗಿನಿಂದ ಹಾಗೂ ಕಚೇರಿಯ ಸೀಲನ್ನು ಹಾಕಲಾಯಿತು. ಅಧಿಕಾರಿಗಳು ಹಾಗೂ ಪಂಚರ ಸಹಿವುಳ್ಳ ಚೀಟಿಗಳನ್ನು ತಯಾರಿಸಿ ಬಾಟಲಿಗಳಿಗೆ ಅಂಟಿಸಲಾಯಿತು. ಸ್ಥಳದಲ್ಲಿ ಪಂಚನಾಮೆಯನ್ನು ಜರುಗಿಸಿ ಮರಳಿ ಠಾಣೆಗೆ ಮುದ್ದೆ ಮಾಲು ಹಾಗೂ ಆರೋಪಿತನೊಂದಿಗೆ ಬಂದು ಠಾಣಾಧಿಕಾರಿಗೆ ಒಪ್ಪಿಸಲಾಯಿತು. ಈ ಕುರಿತು ಹೇಳಿಕೆಯನ್ನು ನೀಡಿದ್ದೇನೆ. ಆರೋಪಿಯನ್ನು ನೋಡಿ ಗುರುತಿಸುತ್ತೇನೆ ಎಂದು ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರಃ **4** ಬೇರೆ ಏನಾದರೂ ಹೇಳುವುದಿದೆಯಾ?

ಉಃ

ಪ್ರಃ **5** ನಿಮ್ಮ ಪರವಾಗಿ ಸಾಕ್ಷಿಗಳನ್ನು ಅಥವಾ ದಾಖಲಾತಿಗಳನ್ನು ಹಾಜರು ಪಡಿಸುವಿರಾ**?**

ಉಃ

(ಮೇಲಿನ ಪ್ರಶ್ನೆಗಳನ್ನು ಆರೋಪಿಗೆ ಅವನಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿ ಅವರಿಂದ ಬಂದ ಉತ್ತರಗಳ್ನು ನನ್ನ ಸ್ವ ಅಕ್ಷರಗಳಲ್ಲಿ ಬರೆದುಕೊಂಡೆ ಅಂತಾ ದೃಡಿಕರಿಸುತ್ತೇನೆ)

**ಗೋಕಾಕ**

**ದಿಃ 24.06.2026** **II ಹೆಚ್ಚುವರಿ ನ್ಯಾ.ದಂ.ಪ್ರ.ವರ್ಗ, ಗೋಕಾಕ.**